ಕಳುಹಿಸಿಕೊಟ್ಟ ತಕ್ಷಣ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕೆಳದಿಯಲ್ಲಿ ಸ್ಥಾಪಿಸಲಾಗುವುದು.

ಪ್ರಾಚ್ಯ ವಸ್ತು ಐತಿಹಾಸಿಕ ಸ್ಮಾರಕಗಳು

176(1078) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ:(ಬಿಜಾಪುರ ನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿರುವ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳನ್ನು ಅತಿಕ್ರಮಣಕಾರರು ಅತಿಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಾವ ಯಾವ ಐತಿಹಾಸಿಕ ಸ್ಮಾರಕಗಳ ಪ್ರದೇಶಗಳನ್ನು ಅತಿಕ್ರಮಿಸಲಾಗಿದೆ ಹಾಗೂ ಎಷ್ಟು ವರ್ಷಗಳಿಂದ ಅತಿಕ್ರಮಿಸಿದ್ದಾರೆ;

ಇ) ಯಾವ ಯಾವ ಐತಿಹಾಸಿಕ ಸ್ಮಾರಕಗಳ ಪ್ರದೇಶದಲ್ಲಿ ಎಷ್ಟು ಪ್ರದೇಶವನ್ನು ಅತಿಕ್ರಿಮಿಸಲಾಗಿದೆ; ಆ ಅತಿಕ್ರಮಣಕಾರರು ಯಾರು ಯಾರು; ಇವರ ವಿರುದ್ಧ ಕೈಗೊಂಡ ಕ್ರಮಗಳೇನು;

ಈ) ಈಗಾಗಲೇ ಯಾವ ಯಾವ ಪ್ರದೇಶದಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗಿದೆ ಹಾಗೂ ಉಳಿದ ಪ್ರದೇಶಗಳಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸದಿರಲು ಕಾರಣಗಳೇನು;

ಉ) ಯಾವ ಕಾಲಮಿತಿಯೊಳಗೆ ಅತಿಕ್ರಮಣಕಾರರನ್ನು ತೆರವುಗೊಳಿಸಲಾಗುವುದು;

ಊ) ಎಷ್ಟು ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ; ಎಷ್ಟು ಪ್ರಕರಣಗಳು ಬಗೆಹರಿದಿವೆ; ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; ಅವು ಯಾವ ಹಂತದಲ್ಲಿವೆ;

ಋ) ಈ ಪ್ರಾಚ್ಯವಸ್ತು ಸ್ಮಾರಕಗಳನ್ನು ಅತಿಕ್ರಮಿಸದಂತೆ ಹಾಗೂ ಸ್ಮಾರಕಗಳನ್ನು ರಕ್ಷಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು)

ಅ) ಬಿಜಾಪುರ ನಗರದಲ್ಲಿರುವ ಪ್ರಾಚ್ಯವಸ್ತು ಐತಿಹಾಸಿಕ ಸ್ಮಾರಕಗಳು ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ಇಲಾಖೆ (ಭಾರತ ಸರ್ಕಾರ) ಯ ವ್ಯಾಪ್ತಿಯೊಳಗೆ ಬರುತ್ತದೆ, ಅತಿಕ್ರಮಣವು ಅವರ ಗಮನಕ್ಕೆ ಬಂದಿರುತ್ತದೆ.

ಆ) ಭಾರತೀಯ ಪುರಾತತ್ವ ಸರ್ವೇಕ್ಷಣ ಧಾರವಾಡ ವಲಯ ಇವರು ಬಿಜಾಪುರ ನಗರದಲ್ಲಿ ಅತಿಕ್ರಮಣಕ್ಕೆ ಒಳಗಾಗಿರುವ ಸ್ಮಾರಕಗಳ ಪಟ್ಟಿಯನ್ನು ಒದಗಿಸಿರುತ್ತಾರೆ ಅದನ್ನು ಲಗತ್ತಿಸಿದೆ

ಇ) ಭಾರತೀಯ ಪುರಾತತ್ವ ಸರ್ವೇಕ್ಷಣಾಲಯವು ನೀಡಿರುವ ಮಾಹಿತಿಯ ಪ್ರಕಾರ ಬಿಜಾಪುರ ನಗರದಲ್ಲಿನ ಸ್ಮಾರಕಗಳ ಪ್ರದೇಶದಲ್ಲಿ ಸುಮಾರು 11774.33ಚ.ಮೀ., ಪ್ರದೇಶವು ಒತ್ತುವರಿಯಾಗಿವೆ. ಈ ಒತ್ತುವರಿಗಳು ಕೊಳಚೆ ಮನೆಗಳು, ತಿರುಗು ಮಾರಾಟಗಾರರು, ತಗಡು ಶೆಡ್‌ಗಳು, ಸಣ್ಣ ಮಳಿಗೆಗಳು, ಗುಡಿಸಲುಗಳು, ಗುಡಾರಗಳು ಮತ್ತು ಮನೆಗಳು ಮುಂತಾದವುಗಳ ರೂಪದಲ್ಲಿ ಕಂಡುಬಂದಿವೆ. ವಕ್ಫ್ ಮಂಡಳಿಯು ತನ್ನ ನಿಯಂತ್ರಣದಲ್ಲಿರುವ ಸ್ಮಾರಕ ಸಮಿತಿಗೆ ವಾಹ್ಗು ಮತ್ತು ಶೌಚಾಲಯ ನಿರ್ಮಾಣ ಕಾರ್ಯಕ್ಕೆ ಅನುಮತಿ ನೀಡಿರುತ್ತದೆ ಎಂಬುದಾಗಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯು ತಿಳಿಸಿರುತ್ತದೆ.

ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಬಿಜಾಪುರ ನಗರದಲ್ಲಿನ ಸ್ಮಾರಕಗಳ ಅತಿಕ್ರಮಣಕಾರರ ವಿರುದ್ಧ ಬೆಂಗಳೂರಿನಲ್ಲಿರುವ ಗೌರವಾನ್ವಿತ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೂಡಿರುತ್ತದೆ.

ಈ) ಭಾರತೀಯ ಪುರಾತತ್ವ ಸರ್ವೇಕ್ಷಣವು ಬಿಜಾಪುರ ಸ್ಮಾರಕಗಳ ಸುತ್ತ ಹರಡಿದ್ದ ಸುಮಾರು 10580ಚ.ಮೀ., ಪ್ರದೇಶವನ್ನು ಈಗಾಗಲೇ ಒತ್ತುವರಿಯಿಂದ ತೆರವುಗೊಳಿಸಲಾಗಿದೆ ಎಂದು ತಿಳಿಯಪಡಿಸಿರುತ್ತಾರೆ. ವಿವರ ಕೆಳಕಂಡಂತಿದೆ.

1. ಜುಮ್ಮಾ ಮಸೀದಿ, ಬಿಜಾಪುರ – 2680 ಚ.ಮೀ,
2. ಕೋಟೆಯ ಗೋಡೆ ಒಂದು ಭಾಗ–2400ಚ.ಮೀ,
3. ಕೋಟೆ ಮತ್ತು ಕಂದಕ – 2500ಚ.ಮೀ,
   (ಕನ್ನಕಿ ಬಜಾರ್)
4. ಶಹಾಪುರ ಗೇಟ್ – 300 ಚ.ಮೀ,
   (ಮಲ್ಲಿಕ್–ಇ–ಮೈದಾನ್ ಗನ್)

– 10580 ಚ.ಮೀ.

ಭಾರತೀಯ ಪುರಾತತ್ವ ಸರ್ವೇಕ್ಷಣವು ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಉಳಿದ ಪ್ರದೇಶಗಳಲ್ಲಿ ಅತಿಕ್ರಮಣಕಾರರನ್ನು ತೆರವುಗೊಳಿಸುವ ಸಲುವಾಗಿ ಪ್ರಸ್ತಾಪಿಸಿರುತ್ತಾರೆ.

ಊ) ಭಾರತೀಯ ಪುರಾತತ್ವ ಸರ್ವೇಕ್ಷಣವು ಬಿಜಾಪುರದಲ್ಲಿನ ಸ್ಮಾರಕಗಳ ಅತಿಕ್ರಮಣವನ್ನು ತೆರವುಗೊಳಿಸಲು ಜಿಲ್ಲಾಮಟ್ಟದ ಅಧಿಕಾರಿಗಳೊಡನೆ ಪ್ರಯತ್ನ ಮುಂದುವರಿಸಿದ್ದು, ಇದು ಕಾನೂನು ಮತ್ತು ಸುವ್ಯವಸ್ಥೆಗೆ ಒಳಪಡುವ ವಿಸಯವಾಗಿರುವುದರಿಂದ ಅತಿಕ್ರಮಣಕಾರರನ್ನು ತೆರವುಗೊಳಿಸಲು ಹೆಚ್ಚಿನ ಕಾಲಾವಕಾಶದ ಅಗತ್ಯವಿದೆ ಎಂದು ತಿಳಿಸಿರುತ್ತಾರೆ.

ಊ) ಒಟ್ಟು 21 ಪ್ರಕರಣಗಳಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯ ನ್ಯಾಯಾಲಯಗಳಲ್ಲಿ ದಾವೆ ಹೂಡಿರುತ್ತದೆ. ಈ ದಾವೆಗಳು ವಿಚಾರಣೆಯ ವಿವಿಧ ಹಂತಗಳಲ್ಲಿ ಇನ್ನೂ ಇತ್ಯರ್ಥವಾಗಬೇಕಾಗಿದೆ, ಎಂದು ತಿಳಿಸಿರುತ್ತಾರೆ.

ಋ) ಭಾರತೀಯ ಪುರಾತತ್ವ ಸರ್ವೇಕ್ಷಣವು ಇತ್ತೀಚೆಗೆ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳ ಅಧಿನಿಯಮ 1958 ಮತ್ತು ನಇಯಮಗಳು 1959 ಇದರ ತಿದ್ದುಪಡಿಯನ್ನು ಮಾಡಿದ್ದು, ಈ ಅಧಿನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ. ಈಗಾಗಲೇ ಈ ಅಧಿನಿಯಮದಡಿ ಅನಧಿಕೃತ ಒತ್ತುವರಿ ಮಾಡಿರುವವರ

ವಿರುದ್ಧ ನೋಟೀಸ್‌ಗಳನ್ನು ಜಾರಿ ಮಾಡುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಮುಖ್ಯಸ್ಥರೊಡಗೂಡಿ ಸಹಯೋಗದೊಡನೆ ಸಾರ್ವಜನಿಕರಲ್ಲಿ ಈ ಕಾಯ್ದೆಯ ಕುರಿತು ಅರಿವನ್ನು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಿದೆ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಸಹಕಾರದೊಡನೆ ಮುನಿಸಿಪಲ್ ಸದಸ್ಯರಿಗೂ ಸಹ ಈ ಕಾಯ್ದೆಯ ಕುರಿತು ಅರಿವನ್ನು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

ಅರಣ್ಯ ಪ್ರದೇಶದ ಒತ್ತುವರಿ

749(1340) ಶ್ರೀ ಅಮರೇಶ್:(ಮುಳಬಾಗಿಲು) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು? (ವಿವರ ಒದಗಿಸುವುದು)

ಆ) ಅರಣ್ಯ ಪ್ರದೇಶದ ಭೂಮಿಯನ್ನು ಎಷ್ಟು ಮಂದಿ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ ಹಾಗೂ ಒತ್ತುವರಿ ಮಾಡಿಕೊಂಡಿರುವ ರೈತರುಗಳಿಗೆ ಸರ್ಕಾರವು ವಿಧಿಸಿರುವ ದಂಡವೇನು?

ಇ) ಹಲವಾರು ವರ್ಷಗಳಿಂದ ಒತ್ತುವರಿ ಭೂಮಿಯಲ್ಲಿಯೇ ಬಡ ರೈತ ಕುಟುಂಬಗಳು ಜೀವನೋಪಾಯವನ್ನು ನಡೆಸುತ್ತಿರುವ ಇವರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಯವರು)

ಅ) ಮುಳಬಾಗಿಲು ತಾಲ್ಲೂಕಿನಲ್ಲಿರುವ ಅರಣ್ಯ ಪ್ರದೇಶದ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಅರಣ್ಯದ ಹೆಸರು	ವಿಸ್ತೀರ್ಣ (ಎಕರೆಗಳಲ್ಲಿ)
1	ಗೋಕುಂಟೆ ಆರ್.ಎಫ್	3267.35
2	ಕಾಶೀಮರ ಆರ್.ಎಫ್	351.00
3	ಅಗರ ಆರ್.ಎಫ್ (part)	5052.33